ಅಧ್ಯಕ್ಷರು : ಮಂಡಿಸಲಾಯಿತು

ನಿಲುವಳಿ ಸೂಚನೆ

ಎ.ಪಿ.ಎಂ.ಸಿ.ಯಲ್ಲಿ ನಾಮಿನೇಷನ್ ಪದ್ಧತಿಯಿಂದ ಆಗಿರುವ ದುಷ್ಪರಿಣಾಮಗಳ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ನಿಲುವಳಿ ಸೂಚನೆ ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಎ.ಪಿ.ಎಂ.ಸಿ.ಯಲ್ಲಿ ನಾಮಿನೇಷನ್ ಪದ್ಧತಿಯನ್ನು ಸರ್ಕಾರದವರು ತಂದು ಇಡೀ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ. ಆ ದೃಷ್ಟಿಯಿಂದ ನಾವು ನಿಲುವಳಿ ಸೂಚನೆ ತಂದಿದ್ದೇವೆ.

ಅಧ್ಯಕ್ಷರು : ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸುವುದು ಬೇಡ, ಬೇರೆ ಸಂದರ್ಭದಲ್ಲಿ ಬೇಕಾದರೆ ಪ್ರಸ್ತಾಪಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ವಿಷಯ ಬಹಳ ಜರೂರು ಇರುವುದರಿಂದ, ಏಕೆಂದರೆ, ನಾಮಿನೇಷನ್ ಮಾಡಿದಲ್ಲಿ 46 ಎಪಿಎಂಸಿ ಪೈಕಿ 36ರಲ್ಲಿ ಅಧ್ಯಕ್ಷರುಗಳ ಏರುಪೇರಾಗುತ್ತದೆ.

ಅಧ್ಯಕ್ಷರು : ಡಿಮ್ಯಾಂಡ್ಸ್ ಬಂದಾಗ ಇದರ ಮೇಲೆ ಮಾತನಾಡಬಹುದಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಿಮ್ಯಾಂಡ್ಸ್ ಮೇಲೆ ಮಾತನಾಡಿದರೆ ನಿರ್ದಿಷ್ಟವಾದ ಉತ್ತರ ಬರುವುದಿಲ್ಲ. ಏಕೆಂದರೆ, ಡಿಮ್ಯಾಂಡ್ಸ್ ಮೇಲೆ ಜನರಲ್ ಆಗಿ ಮಾತನಾಡುತ್ತೇವೆ, ಅವರು ಜನರಲ್ ಆಗಿ ಉತ್ತರ ಕೊಡುತ್ತಾರೆ.

MR. SPEAKER : Alright, I will find out with my staff. We will find some time.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ನಮಗೆ ಯಾವಾಗ ಅವಕಾಶ ಕೊಡುತ್ತೀರೋ, ಆಗ ಚರ್ಚಿಸಲು ನಾವು ಸಿದ್ಧರಾಗಿದ್ದೇವೆ. ಇದನ್ನು ನಾಳೆ ಕೈಗೆತ್ತಿಕೊಂಡರೂ ಸಿದ್ಧರಿದ್ದೇವೆ. ಇದು ಬಹಳ ಮುಖ್ಯವಾಗಿದ್ದು, ಇದರ ಬಗ್ಗೆ ಸಾಕಷ್ಟು ಹೋರಾಟ ಮಾಡಿರುವುದಲ್ಲದೆ, ನಾವು ರಾಜ್ಯಪಾಲರನ್ನು, ಮುಖ್ಯಮಂತ್ರಿಗಳನ್ನು ಭೇಟಿಯಾಗಿ ತಿಳಿಸಿರುವುದಲ್ಲದೆ ನಿಮ್ಮನ್ನೂ ಕೂಡ ಭೇಟಿ ಮಾಡಿದ್ದೇವೆ, ಯಾರೂ ಕೂಡ ಅದರ ಬಗ್ಗೆ ಪ್ರತಿಕ್ರಿಯಿಸಿಲ್ಲ. ಅವರ ವರದಿಯ ವಿರುದ್ಧವೇ ಹೋಗಿದ್ದಾರೆ. ಆದುದರಿಂದ, ತಾವು ಯಾವಾಗ ಸಮಯ ಕೊಡುತ್ತೀರೋ ಆಗ ಪ್ರಸ್ತಾಪಿಸುತ್ತೇವೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಿದ ವಿಷಯಗಳು

ನರಹಂತಕ ವೀರಪ್ಪನ್ ಶರಣಾಗುತ್ತಿರುವ ವಿಚಾರದಲ್ಲಿ ಮಾತುಕತೆಗಾಗಿ ಮುಖ್ಯಮಂತ್ರಿಗಳು, ಕಾನೂನು ಸಚಿವರು ಹಾಗೂ ಗೃಹ ಸಚಿವರು ಚೆನ್ನೈಗೆ ತೆರಳಿರುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಸ್ವಲ್ಪ ತಡವಾಗಿ ಬಂದೆ, ತಮ್ಮನ್ನು ನೀಟಿ ಮಾಡುವುದಕ್ಕಾಗಲಿಲ್ಲ, ಕ್ಷಮಿಸಬೇಕು. ವಿಷಯವೇನೆಂದರೆ, ವೀರಪ್ಪನ್ ವಿಚಾರವನ್ನು ಅಷ್ಟು

ಲಘುವಾಗಿ ಕೈಬಿಡುವಂಥಾದ್ದಲ್ಲ. ಸರ್ಕಾರ ಈಗ ಅದರ ಬಗ್ಗೆ ಹೇಳಿಕೆ ಕೊಡಬೇಕು. ಸರ್ಕಾರ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಿಳುನಾಡಿಗೆ ಹೋಂ ಮಿನಿಸ್ಟರ್, ಪೊಲೀಸರು ಎಲ್ಲರೂ ಹೋಗಿದ್ದಾರೆ, ಏನ ನಡೆದಿದೆಯೆಂದು ಗೊತ್ತಿಲ್ಲ. ಇಲ್ಲಿ ಸದನ ನಡೆಯುತ್ತಿದ್ದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವೆಲ್ಲರೂ ಓದಿಕೊಂಡು ಪ್ರಸ್ತಾಪಿಸಬೇಕಾದರೆ ಪರಿಸ್ಥಿತಿ ಏನಾಗಿದೆ?

ಶ್ರೀ ಕೆ.ಎಸ್. ಈಶ್ವರಪ್ಪ : ವೀರಪ್ಪನ್ ವಿಚಾರ ಈ ರಾಜ್ಯದಲ್ಲಿ, ದೇಶದಲ್ಲಿ ಚರ್ಚೆಯಾಗುತ್ತಿರುವುದರಿಂದ ಸದನದಲ್ಲಿ ಇದರ ಬಗ್ಗೆಯೂ ಚರ್ಚೆಯಾಗಬೇಕು ಮತ್ತು ಸರ್ಕಾರ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನಾನು ಏನು ಹೇಳುತ್ತಿದ್ದೇನೆಂದರೆ, ಈ ಸುದ್ದಿ ಪ್ರಾರಂಭವಾಗಿರುವುದು ಚೆನ್ನೈನಿಂದ. 'ನಕ್ಕೀರನ್' ಪತ್ರಿಕೆಯ ಸಂಪಾದಕರಾದ ಗೋಪಾಲನ್ ಎನ್ನುವವರು ಅಲ್ಲಿನ ಸರ್ಕಾರಕ್ಕೆ ಸುದ್ದಿ ತಿಳಿಸಿದ ನಂತರ ಅವರು ಆ ಕುರಿತ ವಿಚಾರವನ್ನು ನಮ್ಮ ಸರ್ಕಾರಕ್ಕೆ ತಿಳಿಸಿದ್ದಾರೆ. ನಂತರ, ಇಲ್ಲಿಂದ ನಮ್ಮ ಮುಖ್ಯಮಂತ್ರಿಗಳು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಮತ್ತು ಗೃಹ ಸಚಿವರು ಎಲ್ಲರೂ ಹೋಗಿದ್ದಾರೆ. ಏನೋ ಒಂದು ಒಳ್ಳೆಯದಾಗತಕ್ಕಂಥ ಸನ್ನಿವೇಶ ಇದೆ. ಈ ಬಗೆಗಿನ ಎಲ್ಲಾ ಮಾಹಿತಿಗಳನ್ನು ಸರ್ಕಾರದಿಂದ ಪಡೆದು ನಿಮಗೆ ಒಪ್ಪಿಸುವುದಕ್ಕೆ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಯಾವುದು ಒಳ್ಳೆಯದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಳ್ಳೆಯದಾಗಲಿ. ನೀವು ಹೇಳಿದ್ದನ್ನು ಕೇಳಬೇಕೆಂದೇ ನಾವು ಕುಳಿತಿದ್ದು. ಅಲ್ಲಿ ಏನು ನಡೆದಿದೆಯೆಂಬುದನ್ನು ಸದನಕ್ಕೆ ಹೇಳುವುದಿಲ್ಲವೆಂದರೆ ಇದ್ಯಾವ ನ್ಯಾಯ?

ಶ್ರೀ ವಾಟಾಳ್ ನಾಗರಾಜ್ : ಏನು ನಡೆದಿದೆ? ನಮ್ಮ ಸರ್ಕಾರ ಏನಾಗಿದೆ? ಮುಖ್ಯಮಂತ್ರಿಗಳು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಅಲ್ಲಿಗೆ ಏಕೆ ಹೋಗಬೇಕು? ಏನು ಕಾರಣ? ತಮಿಳುನಾಡು ಮುಖ್ಯಮಂತ್ರಿಗಳು ಕರೆದ ತಕ್ಷಣ ಹೋಗುವ ಉದ್ದೇಶವೇನು? ಏನು ಸಮಸ್ಯೆ ಇದೆ?

ಅಧ್ಯಕ್ಷರು : ನಿನ್ನೆ ದಿವಸ ನಾವು ಸದನವನ್ನು ಮುಂದೂಡುವುದರೊಳಗಾಗಿ ಈ ಕುರಿತ ವರ್ತಮಾನವಿರಲಿಲ್ಲ, ಅನಂತರ ಈ ಬೆಳವಣಿಗೆಯಾಗಿ, ಅವರಿಗೆ ಸೂಚನೆ ಬಂದಿರುವುದು. ಏನಾಯಿತು, ಏನಾಗಿಲ್ಲ ಎನ್ನುವುದಕ್ಕೆ ನನ್ನ ಅನುಮತಿ ಪಡೆದು ಈಗ ಮಾತುಕತೆಗೆ ಹೋಗಿದ್ದಾರೆ, ಅವರು ಬಂದ ನಂತರ ಎಲ್ಲವನ್ನೂ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಒಂದು ಪ್ರಶ್ನೆಯೇನೆಂದರೆ, ಸದನ ನಡೆಯುವಾಗ ಇವೊತ್ತಿನ ಪತ್ರಿಕೆಯಲ್ಲಿ ಆತ ಶರಣಾಗಾಗುವುದಾಗಿ ವರದಿಯಾಗಿದೆ. ಆತ ಶರಣಾಗುತ್ತಿರುವ

ವಿಚಾರದಲ್ಲಿ ಮಾತುಕತೆಗಾಗಿ ಮುಖ್ಯಮಂತ್ರಿಗಳನ್ನು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರನ್ನು ಹಾಗೂ ಗೃಹ ಸಚಿವರನ್ನು ಕರೆದಿದ್ದಾರೆಂದರೆ ಯಾವ ಮಹತ್ವದ ಕಾರಣ, ವಿಚಾರಕ್ಕಾಗಿ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿದೆ? ಇದು ಖಂಡಿತಾ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ತಪ್ಪು ಹೆಜ್ಜೆಯಿಡುತ್ತಿದೆ, ಬಹಳ ಅಪಾಯಕಾರಿ ಹೆಜ್ಜೆಯನ್ನು ಈ ವಿಚಾರದಲ್ಲಿ ಇಡುತ್ತಿದೆ. ನಮ್ಮ ಸದನ ಇದಕ್ಕೆ ಒಪ್ಪಬಾರದು, ನಾನಂತೂ ಒಪ್ಪಲು ಸಾಧ್ಯವಿಲ್ಲ. ನಮ್ಮ ರಾಜ್ಯದ ನೂರಾರು ಜನರನ್ನು ಬಲಿ ತೆಗೆದುಕೊಂಡಿರುವ, ಆತನ ವಿರುದ್ಧ ದಾಖಲಾಗಿರುವ ಕೇಸುಗಳನ್ನೆಲ್ಲಾ ಆ ರಾಜ್ಯಕ್ಕೆ ವರ್ಗಾವಣೆ ಮಾಡುವುದಾದರೆ ಈ ರಾಜ್ಯದ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ಅಧ್ಯಕ್ಷರು : ಏನಾಯಿತೆಂದು ಮಾತನಾಡುತ್ತಿದ್ದೀರಿ? ಯಾವ ಆಧಾರದ ಮೇಲೆ ಮಾತನಾಡುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಯಾವ ಆಧಾರ ಬೇಕು? ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿರುವುದೇ ಆಧಾರ.

ಅಧ್ಯಕ್ಷರು : ತಾನು ಹೇಳುತ್ತಿರುವುದೇನೆಂದರೆ, ತಮ್ಮ ಅಭಿಪ್ರಾಯ ವ್ಯಕ್ತಪಡಿಸತಕ್ಕಂಥ ಸಂಪೂರ್ಣ ಹಕ್ಕು ತಮಗಿರುತ್ತದೆ, ಸದನದಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ. ಈ ಕುರಿತ ಬೆಳವಣಿಗೆಗಳು ಅನಿರೀಕ್ಷಿತವಾಗಿ ನಡೆದಿರುವುದರಿಂದ ಇವರನ್ನು ಕರೆದುಕೊಂಡು ಬನ್ನಿ ಎಂದು ಅಲ್ಲಿನ ಮುಖ್ಯಮಂತ್ರಿಗಳೇನೂ ಹೇಳಿಲ್ಲ. ಇಲ್ಲಿನ ಮುಖ್ಯಮಂತ್ರಿಗಳೇ ತಮ್ಮ ವಿವೇಚನೆಯಿಂದ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರನ್ನು ಹಾಗೂ ಗೃಹ ಸಚಿವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದಾರೆ. ಈಗ ಅವರು ಅಲ್ಲಿ ಏನು ತೀರ್ಮಾನ ಮಾಡಿಕೊಂಡು ಬರುತ್ತಾರೋ, ಅದರ ಮೇಲೆ ತಾವು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ಅವರು ಹೋಗಿದ್ದೇ ಸರಿಯಿಲ್ಲ. ಸರ್ಕಾರ ವೀರಪ್ಪನ್‌ಗೆ ಏನಾದರೂ ಶರಣಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ : ಸಂಬಂಧಪಟ್ಟ ಖಾತೆಯ ಮಂತ್ರಿಗಳು ಅಲ್ಲಿಗೆ ಹೋಗಿ ಮಾತನಾಡಿಕೊಂಡು ಬರಲಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮ್ಮ ರಾಜ್ಯದಲ್ಲಿ ಆತನ ವಿರುದ್ಧ ಹೂಡಲಾಗಿರುವ ಕೇಸುಗಳನ್ನು ತಮಿಳುನಾಡಿಗೆ ವರ್ಗಾವಣೆಯಾಗಬಾರದು. ಯಾವ ಕಾರಣಕ್ಕಾಗಿ ಇದು ಆಗಬೇಕು? ಕರ್ನಾಟಕ ಸರ್ಕಾರಕ್ಕೆ ನಾನು ಹೇಳುತ್ತಿದ್ದೇನೆ, ನಮ್ಮಲ್ಲಿನ ಒಂದು ಕೇಸೂ ಸಹ ತಮಿಳುನಾಡಿಗೆ ವರ್ಗಾವಣೆಯಾಗಬಾರದು. ನೀವು ಇಲ್ಲಿಯವರೆಗೆ ಪಟ್ಟಿರುವ ಶ್ರಮವೇನಾಯಿತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈ ಸದನ ನಡೆಯುವಾಗ ಮತ್ತು ಈ ವಿಷಯವನ್ನು ನಾವು ಅನೇಕ ಸಾರಿ ಇಲ್ಲಿ ಪ್ರಸ್ತಾಪ ಮಾಡಿದಾಗ

ತಾವು ಏನು ಹೇಳಿದ್ದೀರಿ, ಇಲ್ಲ ಇದು ಬಹಳ ಸೆನ್ಸಿಟೀವ್ ಇಶ್ಯೂ ಅದರ ಬಗ್ಗೆ ನಾವು ಪ್ರಸ್ತಾಪ ಮಾಡುವುದು ಬೇಡ, ಚರ್ಚೆ ಮಾಡುವುದು ಬೇಡ. ನಾವು ಬೇಕಾದರೆ ತಮ್ಮ ಚೇಂಬರ್‌ನಲ್ಲಿ ಇದರ ಬಗ್ಗೆ ಮಾತುಕತೆ ಆಡಿ ಏನು ನಡೆದಿದೆ ಎಂದು ತಿಳಿಸಿಕೊಂಡು, ತಿಳಿದಮೇಲೆ ಬೇಕಾದರೆ ಮುಂದೆ ಇದರ ಬಗ್ಗೆ ಎರಡು ಮೂರು ದಿವಸದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಕುಳಿತುಕೊಳ್ಳಿ ಎಂದು ಹೇಳಿದ್ದೀರಿ. ಆದರೆ ಇವೊತ್ತು ಏನಾಗಿದೆ ಎಂದರೆ ಸದನದಲ್ಲಿ ಅಂತಹ ಮಹತ್ವವಾದ ವಿಷಯಗಳು ಪ್ರಸ್ತಾಪವೇ ಆಗುವುದಿಲ್ಲ. ಪತ್ರಿಕೆಯಲ್ಲಿ ಬರುತ್ತವೆ, ಟಿ.ವಿಯಲ್ಲಿ ಬರುತ್ತವೆ, ಹೊರಗಡೆ ಅವರು ಹೇಳುತ್ತಾರೆ, ಅವರ ಮುಖಾಂತರ ನಾವು ತಿಳಿದುಕೊಳ್ಳಬೇಕಾದರೆ ಈ ಸದನಕ್ಕೆ ಏನಾದರೂ ಮರ್ಯಾದೆ ಇದೆಯೋ ಇಲ್ಲವೋ ಎಂದು ನಾನು ಕೇಳುತ್ತೇನೆ. ಯಾರೋ ಕಾರ್ಯದರ್ಶಿಗಳು ಹೋಗಿದ್ದಾರೆ, ಡಿ.ಜಿ.ಪಿ. ಹೋಗಿದ್ದಾರೆ ಪೋಲೀಸ್ ಅಧಿಕಾರಿಗಳು ಹೋಗಿದ್ದಾರೆ ಅವರು ಅಲ್ಲಿ ಏನು ನಡೆದಿದೆ ಎಂಬುದರ ಬಗ್ಗೆ ಚರ್ಚೆ ಮಾಡಿಕೊಂಡು ತಿಳಿದುಕೊಂಡು ಬಂದು ತಿಳಿಸಿದ್ದಾರೆ ಎಂದರೆ ನಾನೇನಾದರೂ ಅದಕ್ಕೆ ಒಪ್ಪಿಕೊಳ್ಳುತ್ತಿದ್ದೆ. ಆದರೆ ಇವೊತ್ತು ನಾವು ಪತ್ರಿಕೆಯಲ್ಲಿ ಓದುತ್ತೇವೆ, ವಾರ್ತೆಗಳಲ್ಲಿ ಕೇಳುತ್ತೇವೆ ತರಾತುರಿಯಲ್ಲಿ ಮುಖ್ಯಮಂತ್ರಿಗಳು ಹೋಗಿದ್ದಾರೆ ಎಂದು ಅಂದರೆ ಕಾನೂನು ಸಚಿವರು, ಗೃಹ ಸಚಿವರು, ಎಲ್ಲಾ ಸಿಬ್ಬಂಧಿವರ್ಗದವರು ಅಲ್ಲಿ ಹೋಗಿರುವುದು ಒಂದು ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕಾ? ಅವರು ಏತಕ್ಕೆ ಹೋಗಿದ್ದಾರೆ ಎನ್ನತಕ್ಕಂಥದ್ದು ಈ ಸದನಕ್ಕೆ ಗೊತ್ತಿಲ್ಲ ಎಂದರೆ ನಾವು ಯಾರಿಗೆ ಕೇಳಬೇಕು ಅಧ್ಯಕ್ಷರೇ? ನಾವು ಎಲ್ಲಿ ಹೋಗಿ ಕೇಳೋಣ? ಯಾರು ಮುಂದೆ ಹೇಳೋಣ? ಜನ ನಮಗೆ ಕೇಳುತ್ತಾರೆ, ಜನರಿಗೆ ಗೊತ್ತಾಗಬೇಕಲ್ಲಾ ಅವರು ಈ ಸದನಕ್ಕೆ ತಿಳಿಸದೆ, ಹೇಳದೆ ಹೋಗಿದ್ದು ಇದು ಅಕ್ಷಮ್ಯ ಅಪರಾಧ. ಇದರ ಬಗ್ಗೆ ಅವರು ಕ್ಷಮೆ ಕೇಳಬೇಕು.

ಅಧ್ಯಕ್ಷರು : ಆಯಿತು. ನೀವು ಹೇಳುವುದನ್ನು ಹೇಳಿಬಿಟ್ಟಿದ್ದೀರಿ. ಈಗ ಸರ್ಕಾರ ಏನು ಹೇಳುತ್ತದೆ ನೋಡೋಣ. ಮಾನ್ಯ ಸಿಂಧ್ಯರವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಅರಗ ಜ್ಞಾನೇಂದ್ರ : ಎರಡೂ ಸರ್ಕಾರದವರು ಸೇರಿ ವೀರಪ್ಪನ್‌ನನ್ನು ಹೀರೋ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಜ್ಞಾನೇಂದ್ರರವರೇ, ಯಾರು ಯಾರನ್ನು ಹೀರೋ ಮಾಡುವುದು? ಪತ್ರಿಕೆಗಳವರು ದಿವಸ ಅವನ ಫೋಟೋ ಹಾಕುತ್ತಾರೆ. ಅವನ ವಿಚಾರವನ್ನು ಹೆಡ್‌ಲೈನ್ಸ್‌ನಲ್ಲಿ ಪ್ರಿಂಟ್ ಮಾಡುತ್ತಾರೆ. ಅಂತಹವರ ಹೆಸರಿನಲ್ಲಿ ಸಿನಿಮಾಗಳನ್ನು ತೆಗೆಯುತ್ತಿದ್ದಾರೆ, ಅಂತಹವರನ್ನು ವೈಭವೀಕರಣ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪತ್ರಿಕೆಗಳವರು ಹೀರೋ ಮಾಡಲಿ ಅಥವಾ ಜೀರೋ ಮಾಡಲಿ. ನಾನು ಕೇಳುವುದು ಏನೆಂದರೆ You owe a responsibility. to this House. ಇಲ್ಲ ನನಗೆ ಕರೆದಿದ್ದಾರೆ, ನಾನು ಹೋಗುತ್ತಿದ್ದೇನೆ, ಈ ತರಹ ಕಂಡಿಷನ್ಸ್ ಹಾಕಿದ್ದಾರೆ ನಾನು ಹೋಗಿ

ಮಾತನಾಡಿಕೊಂಡು ಬರುತ್ತೇನೆ ಎಂದು ಹೇಳತಕ್ಕಂಥ ಸೌಜನ್ಯ ಕೂಡ ಈ ಸರ್ಕಾರದವರಲ್ಲಿ ಇಲ್ಲವೆಂದರೆ ನಾವು ಏನು ಹೇಳಬೇಕು.

MR. SPEAKER : It is a sudden development.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಭಾಧ್ಯಕ್ಷರೇ, How can it be? ಇಲ್ಲಿ ಸದನ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಏನು ಹೇಳಿದಿರಿ. ಈ ಸದನ ಮುಗಿಯುತ್ತಿತ್ತು, ಅಷ್ಟರೊಳಗೆ ಈ ಸುದ್ದಿ ಬಂತು ಎಂದು.

ಅಧ್ಯಕ್ಷರು : ಸದನ ಮುಗಿಯುತ್ತಿತ್ತು ಎಂದು ಅಲ್ಲ, ನೆನ್ನೆ ಈ ಸದನ ಮುಂದಕ್ಕೆ ಹಾಕಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಸದನ ಮುಗಿದು ಹೋಗಿತ್ತು ಎಂದು ಆದರೆ ಇವೊತ್ತು ಹೋಗತಕ್ಕಂಥ ತರಾತುರಿ ಏನಿತ್ತು? ಅಂತಹ ತಲೆ ಬಿದ್ದುಹೋಗತಕ್ಕಂಥ ವ್ಯವಸ್ಥೆಗಳು ಏನಿತ್ತು? ಮುಖ್ಯಮಂತ್ರಿಗಳು ತರಾತುರಿಯಲ್ಲಿ ಹೋಗತಕ್ಕಂಥದ್ದು ಈ ರಾಜ್ಯಕ್ಕೆ ಅಗೌರವ, ಅದು ರಾಜ್ಯಕ್ಕೆ ಮಾಡತಕ್ಕಂಥ ದ್ರೋಹ ಆಗುತ್ತದೆ. ನಿಜವಾಗಿಯೂ ಇದು ಒಳ್ಳೆಯದಲ್ಲ. ಅವರ ಬಗ್ಗೆ ನಮಗೆ ಎಷ್ಟೇ ಗೌರವ ಇರಲಿ ಆದರೆ ಇದು ಒಳ್ಳೆಯ ನೀತಿ ಅಲ್ಲ. ಅವರು ಈ ವಿಚಾರದಲ್ಲಿ ಮಾತ್ರ ತಪ್ಪು ಹೆಜ್ಜೆ ಇಡುತ್ತಿದ್ದಾರೆ. ಇದು ಖಂಡಿತ ಒಳ್ಳೆಯ ನೀತಿಯಲ್ಲ. ಮತ್ತು ಇದು ಸದನಕ್ಕೆ ಮಾಡಿದಂಥ ಅಪಚಾರ ಆಗುತ್ತದೆ. ನಾವಂತೂ ಇದನ್ನು ಒಪ್ಪುವುದಕ್ಕೆ ಖಂಡಿತ ಸಾಧ್ಯವಿಲ್ಲ. ಯಾವ ಕಾರಣಕ್ಕೂ ನಾವು ಒಪ್ಪುವುದಿಲ್ಲ. ಈ ವಿಚಾರವನ್ನು ಈ ರಾಜ್ಯದ ಜನತೆ ಕ್ಷಮಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೊನೆಯ ಪಕ್ಷ ತಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೇ? Then that letter may be placed on the Table of the House. and for what cost he has gone and for what reason he has gone.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರಿಗೆ ಯಾರಾದರೂ ಕಾಗದ ಬರೆದರೆ ಅದನ್ನು ಅಧ್ಯಕ್ಷರು ಸದನಕ್ಕೆ ತಿಳಿಸಬಹುದೇ ವಿನಹ ಈ ಪತ್ರವನ್ನು ಸದನದಲ್ಲಿ ಪ್ರೊಡ್ಯೂಸ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. It is a very bad precedent. It is not correct. Please don't produce that letter.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಪ್ರೇಮ ಪತ್ರ ಅಲ್ಲ, ಮುಖ್ಯಮಂತ್ರಿಗಳು ಮದ್ರಾಸಿಗೆ ಹೋಗುತ್ತಿದ್ದೇನೆ ಎಂದು ಹೇಳಿ ಬರೆದಿರತಕ್ಕಂಥ ಪತ್ರ ಇದು. ಇದು ವೈಯಕ್ತಿಕವೇನಲ್ಲ. ಗೋಪ್ಯವಾಗಿಡತಕ್ಕಂಥ ಪತ್ರವೇನಲ್ಲ. ಈ ಸದನಕ್ಕೆ ತೋರಿಸತಕ್ಕಂಥ ಪತ್ರವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ತಮಗೂ ಮುಖ್ಯಮಂತ್ರಿಯವರಿಗೂ ಖಾಸಗಿಯಾಗಿರುವ ವಿಚಾರ ಆಗಿದ್ದರೆ ಖಂಡಿತ ಬೇಡ. ಆದರೆ ಇಡೀ ರಾಜ್ಯದಲ್ಲಿ ಕೊಲೆಗಳನ್ನು ಮಾಡಿರತಕ್ಕಂಥ ವ್ಯಕ್ತಿ ಅವನು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೊಲೆಗಡುಕ ಅವನು, ಅವನ ಬಗ್ಗೆ ಸರ್ಕಾರ ಕರುಣೆ ತೋರಿಸಿದರೆ ನಾವೆಲ್ಲಾ ಎಲ್ಲಿ ಹೋಗಬೇಕು? ಲೂಟಿ ಮಾಡಿದ್ದಾನೆ, ಕೊಲೆ ಮಾಡಿದ್ದಾನೆ, ದರೋಡೆ ಮಾಡಿದ್ದಾನೆ. ಭಯ ಭೀತಿ ಹುಟ್ಟಿಸಿದ್ದಾನೆ. ಕರ್ನಾಟಕದ ಪೋಲೀಸರನ್ನು ಕೊಂದಿದ್ದಾನೆ. ಅವನಿಗಾಗಿ ಇವ್ಹೊತ್ತು ನಾವು ತಮಿಳುನಾಡಿಗೆ ಹೋಗಿ ಮಾತನಾಡತಕ್ಕಂಥದ್ದು ಯಾವ ನೀತಿ ಇದು? ನನ್ನ ಕ್ಷೇತ್ರದಲ್ಲಿ ಅವನಿಂದ ಅನೇಕ ಜನ ಸತ್ತಿದ್ದಾರೆ. ಕಂಗಾಲಾಗಿದ್ದಾರೆ ಅವರ ಮನೆಯವರ ಆ ನೋವು ನನಗೆ ಇದೆ.

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳುತ್ತೀರಾ?

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪನವರೇ ನಾನು ನಿಮ್ಮ ಮಾತನ್ನು ಕೇಳಿದ್ದೇನೆ.

ಶ್ರೀ ಎಂ. ಶ್ರೀನಿವಾಸ್ : ಸದನ ಅಡ್ಜರ್ನ್ ಆದರೆ ಏನಾಯಿತು ವಿರೋಧ ಪಕ್ಷದ ನಾಯಕರನ್ನು ಕರೆದು ಈ ರೀತಿ ನಾನು ಹೋಗುತ್ತಿದ್ದೇನೆ ಎಂದು ಹೇಳಿದರೆ ಏನಾಗುತ್ತಿತ್ತು? ಇವರು ಏನು ಸಾಧನೆ ಮಾಡುವುದಕ್ಕೆ ಹೋಗಿದ್ದಾರೆ? ಅವನು ನೂರಾರು ಜನರನ್ನು ಕೊಂದಿದ್ದಾನೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರಿಗೆ ಇರತಕ್ಕಂಥ ಸ್ಥಾನ ಮಾನಗಳನ್ನು ಈ ಸದನ ಒಪ್ಪಿಕೊಂಡಿದೆ, ನಾವು ಒಪ್ಪಿಕೊಂಡಿದ್ದೇವೆ. ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಯಾವುದೇ ಆದಂಥ ಪತ್ರವನ್ನು ಈ ಸದನದಲ್ಲಿ ಓದಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮಗೂ ಕೂಡ ಅವರ ಬಗ್ಗೆ ಗೌರವ ಇದೆ. ಆ ಪೀಠದ ಬಗ್ಗೆ ಗೌರವ ಇದೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ ನಾಗೇಗೌಡರೇ ಈ ರಾಜ್ಯವನ್ನು ಲೂಟಿ ಮಾಡಿದಂಥ, ಕೊಲೆಗಡುಕನ ಬಗ್ಗೆ ಕರುಣೆ ತೋರಿಸತಕ್ಕಂಥ ವಿಚಾರ ಬಂದಾಗ ತಾವೂ ಕೂಡ ನಮ್ಮ ಜೊತೆ ನಿಲ್ಲಬೇಕು.

(ಗೊಂದಲ)

ಅಧ್ಯಕ್ಷರು : ವಾಟಾಳರೇ, ಮಾತನಾಡುವಾಗ ಎಲ್ಲೆಲ್ಲಿ ಹೊರಟುಹೋಗುತ್ತೀರಿ? ಯಾರು ಕರುಣೆ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಪ್ಪು ಮಾಡಿದ್ದರೆ ಈ ಸದನದಲ್ಲಿ ಕ್ಷಮಾಪಣೆ ಕೇಳುತ್ತೇನೆ. ನಾನು ಎಲ್ಲೂ ಹೋಗಿಲ್ಲ, ಇಲ್ಲೇ ಇದ್ದೇನೆ. ತಾವು ಹೇಳಿ ನಾನೇನು ತಪ್ಪು ಮಾಡಿದ್ದೇನೆ?

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಈಗ ಈಶ್ವರಪ್ಪನವರು ಮಾತನಾಡುವಾಗ ಆತುರಪಟ್ಟರು, ಅಧ್ಯಕ್ಷರಿಗೆ ಮುಖ್ಯಮಂತ್ರಿಗಳಿಗೆ ಖಾಸಗಿ ವ್ಯವಹಾರ ಎಂದು, ಏನಿದು?

ಶ್ರೀ ಕೆ.ಎನ್. ನಾಗೇಗೌಡ : ಆ ರೀತಿ ಮಾತನಾಡಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹಾಗೆ ಹೇಳಲಿಲ್ಲ.

ಅಧ್ಯಕ್ಷರು : ತೆಗೆಸಿ ನೋಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹೇಳಿದ್ದುದು, ಖಾಸಗಿ ವಿಚಾರ ಇದ್ದರೆ ಖಂಡಿತ ನಮಗೆ ಬೇಕಾಗಿಲ್ಲ, ಇಡೀ ರಾಜ್ಯದ ಜನಕ್ಕೆ...

ಶ್ರೀ ವಾಟಾಳ್ ನಾಗರಾಜ್ : ನಾನೇನಾದರೂ ತಪ್ಪು ಹೇಳಿದ್ದರೆ ಈ ಸದನದಲ್ಲಿ ಕ್ಷಮಾಪಣೆಯನ್ನು ಕೇಳುತ್ತೇನೆ, ದಯಮಾಡಿ ಆ ಮಾತನ್ನು ತೆಗೆಯಿರಿ. ನಾನು ಹೇಳಿದ್ದರೆ.

ಅಧ್ಯಕ್ಷರು : ನೀವಲ್ಲ, ದಯಮಾಡಿ ಕುಳಿತುಕೊಳ್ಳಿ. ಅದು ಏಕೆ ಅಷ್ಟು ಉದ್ವೇಗದಲ್ಲಿ ಇದ್ದೀರಿ. ತಡವಾಗಿ ಬಂದಿದ್ದೀರಿ. ನಾನು ಏನು ಹೇಳುತ್ತಿದ್ದೇನೆ ಎಂದರೆ ಖಾಸಗಿಯಾದಂಥ ವ್ಯವಹಾರ ಅಧ್ಯಕ್ಷರಾದವರಿಗೆ ಎಂದೂ ಯಾರ ಜೊತೆಯಲ್ಲಿ ಇರುವುದಿಲ್ಲ, ಒಂದು ವೇಳೆ ಅಧ್ಯಕ್ಷ ಸ್ಥಾನದಲ್ಲಿರತಕ್ಕಂಥವರಿಗೆ ಈ ಸದನದ ವ್ಯವಹಾರದಲ್ಲಿ ಖಾಸಗಿ ವ್ಯವಹಾರವನ್ನು ಇಟ್ಟುಕೊಂಡರೆ ಆ ಅಧ್ಯಕ್ಷ ಈ ಸ್ಥಾನದಲ್ಲಿ ಒಂದು ಘಳಿಗೆ ಕೂಡ ಕುಳಿತುಕೊಳ್ಳಬಾರದು. ನಾನು ಕುಳಿತುಕೊಳ್ಳುವುದಿಲ್ಲ. ಇದು ಬಹಿರಂಗವಾದಂಥ ವ್ಯವಹಾರ, ಮಾನ್ಯ ಮುಖ್ಯಮಂತ್ರಿಗಳು ಇಷ್ಟೇ ಬರೆದಿದ್ದಾರೆ.....

ಶ್ರೀ ಹೆಚ್.ಎನ್. ನಂಜೇಗೌಡ : ಸಂಪ್ರದಾಯ ಏನು ಎಂದರೆ ಸಭಾಧ್ಯಕ್ಷರಿಗೆ ಮುಖ್ಯಮಂತ್ರಿಗಳು ಅಥವಾ ಇತರ ಮಂತ್ರಿಗಳು ತಿಳಿಸಿದ್ದಾರೆ ಎಂದರೆ ನಾವು ಅದನ್ನು ಪ್ರಶ್ನೆ ಮಾಡುವುದು ಸಂಪ್ರದಾಯವಲ್ಲ. Let us realise our limitations.

MR. SPEAKER : I am aware....

ಶ್ರೀ ಕೆ.ಎನ್. ನಾಗೇಗೌಡ : ಅದೇ ನನ್ನ ಪಾಯಿಂಟ್. ನಾನೂ ಕೂಡ ಬೇರೆ ವಿಚಾರಕ್ಕೆ ಹೋಗಿಲ್ಲ. ನಮ್ಮ ನಡವಳಿಕೆಗಳಲ್ಲಿ ಇದೆ, ನಮ್ಮ ರೂಲಿಂಗ್ಸ್‌ನಲ್ಲಿ ಇವೆ. ಅದಕ್ಕೋಸ್ಕರವಾಗಿ ನಾನು ಹೇಳಿದ್ದು.

ಅಧ್ಯಕ್ಷರು : ಮಾನ್ಯ ನಂಜೇಗೌಡರು, ನಾಗೇಗೌಡರು ಹೇಳಿರುವ ವಿಚಾರದ ಬಗ್ಗೆ ನನಗೆ ಅರಿವು ಇದ್ದರೂ ಕೂಡ ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಈ ವಿಚಾರವನ್ನು ಬಹಿರಂಗಪಡಿಸಲಿಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಮುಚ್ಚಿಡತಕ್ಕಂಥದ್ದು ಏನೂ ಇಲ್ಲ. ಮುಖ್ಯಮಂತ್ರಿಗಳು ಇಷ್ಟನ್ನೇ ಬರೆದಿದ್ದಾರೆ

ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಯವರ ಆಹ್ವಾನದ ಮೇರೆಗೆ 19.8.97ರಂದು ನಾನು ಚೆನ್ನೈಗೆ ತೆರಳಬೇಕಾಗಿರುವುದರಿಂದ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ. ದಯವಿಟ್ಟು ನನಗೆ ಚೆನ್ನೈಗೆ ಹೋಗಿ ಬರಲು ಹಾಗೂ ನನ್ನ ಗೈರು ಹಾಜರಿಯಲ್ಲಿ ಮಾನ್ಯ ಸಾರಿಗೆ ಸಚಿವರು ನನ್ನ ಹೆಸರಿಗೆ ಬರುವ ಪ್ರಶ್ನೆಗಳಿಗೆ ಉತ್ತರಿಸುವ ಅನುಮತಿ ನೀಡಬೇಕೆಂದು ವಿನಂತಿಸುತ್ತೇನೆ. ಇದೇ ರೀತಿ ಪತ್ರಗಳನ್ನು ಮಾನ್ಯ ಕಾನೂನು ಸಚಿವರು ಮತ್ತಿತರ ಸಚಿವರು ಬರೆದು ಕಳುಹಿಸಿದ್ದಾರೆ. ಮಾನ್ಯ ವಾಟಾಳ್‌ರವರು ಏನು ಹೇಳಿದರು ಎಂದರೆ ಅವರಿಗೆ ಕರುಣೆ ತೋರಿಸಲಿಕ್ಕೆ ಹೊರಟಿದ್ದೀರಿ, ಎಂದು ಹೇಳಿದರು ನಾನೇನು ಹೇಳುತ್ತೇನೆ ಎಂದರೆ, ಅವರು ಏತಕ್ಕೆ ಹೋಗಿದ್ದಾರೆ ಎಂದರೆ ತಮಿಳುನಾಡಿನ ಮುಖ್ಯಮಂತ್ರಿಗಳು ಹೇಳಿ ಕಳುಹಿಸಿದ್ದಾರೆ, ಇವರು ಹೋಗಿದ್ದಾರೆ. ಅವರು ಮಾತನಾಡಿಕೊಂಡು ಬರಲಿ. ಅವರು ಮಾತನಾಡಿಕೊಂಡು ಬಂದಿರತಕ್ಕಂಥ ಒಪ್ಪಂದಗಳು ಸರಿಯೋ, ತಪ್ಪೋ ಎಂದು ಅದರ ಬಗ್ಗೆ ಚರ್ಚೆಗೆ ಇಲ್ಲಿ ಅವಕಾಶ ಇರುತ್ತದೆ, ಅದರ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ, ನಿಮಗೆ ಒಪ್ಪಿಗೆ ಇಲ್ಲದಿದ್ದರೆ ಈ ಸದನ ಒಪ್ಪಿಗೆ ಕೊಡುವುದಿಲ್ಲ ಎಂದು ಹೇಳಿ, ಸದನವನ್ನು ಮೀರಿ ಸರ್ಕಾರ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ಸರ್ವ ಸ್ವಾತಂತ್ರ್ಯವನ್ನು ಈ ಸದನ ಹೊಂದಿದೆ. ಉದ್ವೇಗದಲ್ಲಿ ನಾವು ಈಗ ಏನೂ ಮಾತನಾಡುವುದಕ್ಕೆ ಹೋಗಬಾರದು. ಒಬ್ಬ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳು ಅವರು ಇವರೂ ಇಷ್ಟು ದಿನ ಜಂಟಿಯಾಗಿ ಹಿಡಿಯುವುದಕ್ಕೆ ತಮ್ಮದೇ ಆದಂಥ ಪರಿಶ್ರಮವನ್ನು ಮಾಡಿದ್ದರು, ಆ ವಿಚಾರದಲ್ಲಿ ತಾವು ಬರಬೇಕೆಂದು ಒಂದು ಆಹ್ವಾನವನ್ನು ಕಳುಹಿಸಿದ್ದಾರೆ, ಅದು ಬಹುಶಃ ನೆನ್ನೆದಿವಸ ನಮ್ಮ ಸದನ ಮುಗಿದ ಮೇಲೆ ಬಂದಿದೆ, ಅವರು ಹೋಗಿದ್ದಾರೆ, ಈಗ ಸರ್ಕಾರದ ಪರವಾಗಿ ಅವರು ಏನು ಹೇಳುತ್ತಾರೆಂದು ಕೇಳೋಣ. ಆಮೇಲೆ ನೀವು ಮಾತನಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಕಳೆದ ಎರಡು ವರ್ಷಗಳಿಂದ ಈ ಅಸೆಂಬ್ಲಿ ವಿಧಾನಸಭೆ ಒಂದು ರ‍್ಯಾಟಿಫೈಯಿಂಗ್ ಬಾಡಿ ಆಗಿ ಪರಿವರ್ತನೆ ಆಗುತ್ತಿದೆ. ಅದು ಕಾವೇರಿಯ ನೀರು ಬಿಡುವುದರ ಬಗ್ಗೆ ಇರಬಹುದು, ವೀರಪ್ಪನನ್ನು ಹಿಡಿಯುವುದರ ಬಗ್ಗೆ ಇರಬಹುದು, ಕೆ.ಎಸ್.ಆರ್.ಟಿ.ಸಿ. ಬೆಲೆ ಏರಿಕೆ ಬಗ್ಗೆ ಇರಬಹುದು, ನೀವು ಮಾಡಿದಕ್ಕೆಲ್ಲಾ ಅಸ್ತು ಎನ್ನುವುದಕ್ಕೆ We are not being consulted. In this case even that has not taken place. ನಮಗಿರುವ ವರ್ತಮಾನದ ಪ್ರಕಾರ ಐದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಶರಣಾಗುತ್ತಾನೆ ಎಂದು, ಈಗಿರುವ ವರ್ತಮಾನದ ಪ್ರಕಾರ ಐದು ಕೋಟಿ ರೂಪಾಯಿಗಳನ್ನು ಅಧಿಕೃತವಾಗಿ ಕೊಡುವುದಿಲ್ಲ, ಅನ್‌ಆಫಿಷಿಯಲ್ ಆಗಿ ಬಾರಿ ಕುಳ ಯಾರಿಂದಲಾದರೂ ಈ ಐದು ಕೋಟಿಯನ್ನು ಕೊಡಿಸುವುದು ಎಂದು ಹೇಳುತ್ತಾರೆ. ಅದು ತಪ್ಪು. ಇವತ್ತು ಈ ಸಭೆ ಪ್ರಾರಂಭವಾದಗಲೇ ಈ ರೀತಿ ನಾವು ಚೆನ್ನೈಗೆ ಹೋಗುತ್ತಿದ್ದೇವೆಂದು ಹೇಳಬಹುದಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಸ್ಥಾನಕ್ಕೆ ಈ ಸದನದ ಸದಸ್ಯರೆಲ್ಲರೂ ಅತ್ಯಂತ ಗೌರವವನ್ನು ಕೊಡತಕ್ಕಂಥದ್ದು ಮುಖ್ಯ. ನಿನ್ನೆಯ ದಿವಸ ಸದನವನ್ನು ಇವತ್ತಿನ ಬೆಳಗಿನವರೆಗೆ ಮೂಂದೂಡಿದಂತಹ ಸಂದರ್ಭದಲ್ಲಿ ಬೆಳವಣಿಗೆಗಳು ಆಗಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆ. ತಾವೂ ಸಹ ಈ ವಿಚಾರವನ್ನು ಹೇಳಿದ್ದೀರಿ, ಅದಾದನಂತರ

ಸಾಮಾನ್ಯವಾಗಿ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ತಮ್ಮ ಅನುಮತಿಯಿಲ್ಲದೆ ಮುಖ್ಯಮಂತ್ರಿಗಳಾಗಲೀ, ಬೇರೆ ಇತರ ಮಂತ್ರಿಗಳಾಗಲೀ, ಹೊರಗಡೆ ಹೋಗತಕ್ಕ ಸಂಪ್ರದಾಯವಿಲ್ಲ. ಆ ಪ್ರಕಾರವಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಮತಿಯನ್ನು ಕೋರಿ ಪತ್ರವನ್ನು ಬರೆದಿದ್ದಾರೆ. ವಿಷಯ ಇರತಕ್ಕಂಥದ್ದು ಗೌರವಾನ್ವಿತ ಸದಸ್ಯರುಗಳ ಭಾವನೆ ಸರ್ಕಾರಕ್ಕೆ ಅರ್ಥ ಆಗಿದೆ. ಕೆಲವು ಗೌರವಾನ್ವಿತ ಸದಸ್ಯರುಗಳು ಮಾತನಾಡತಕ್ಕ ಸಂದರ್ಭದಲ್ಲಿ ಯಾವ ಆಧಾರದ ಮೇಲೆ ಇದನ್ನೆಲ್ಲಾ ಮಾತನಾಡುತ್ತಿದ್ದಾರೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಇವತ್ತು ಸರ್ಕಾರ ಇದೆ, ಸರ್ಕಾರದ ಆಡಳಿತ ಯಂತ್ರ ಇದೆ, ಅದರ ಆಧಾರದ ಮೇಲೆ ನಾವು ಮಾತನಾಡುತ್ತೇವೆ. ಅಧ್ಯಕ್ಷರೆ, ನಾನು ನಿಮ್ಮನ್ನು ಅಡ್ರೆಸ್ ಮಾಡಿ ಮಾತನಾಡುತ್ತಿದ್ದೇನೆ. ಅವರು ಮಾತನಾಡುವಾಗ ನಾನು ಕೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಮಾತನಾಡುವಾಗ ನಾನು ಹೇಳಿದ್ದೇನೆ, ಇದಕ್ಕೆ ಪತ್ರಿಕೆಗಳೇ ಆಧಾರ. ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ನಡೆದಿರತಕ್ಕಂಥ ವಾದ, ವಿಚಾರಗಳು, ಶಾಸನ ಸಭೆಗಳ ಚರ್ಚೆ ಪತ್ರಿಕೆಗಳ ಆಧಾರದ ಮೇಲೆ ನಡೆದಿದೆಯೇ ಹೊರತು ಇದಕ್ಕಾಗಿ ನಾವು ಹೊಸ ಕಾರ್ಯಾಲಯ, ಸೆಕ್ರೆಟೇರಿಯೇಟ್ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನಮ್ಮ ಸರ್ಕಾರ ಯಾವುದೇ ಅಕ್ಷಮ್ಯ ಅಪರಾಧವನ್ನಾಗಲೀ, ಕ್ಷಮೆ ಕೇಳತಕ್ಕಂಥದ್ದನ್ನಾಗಲೀ ಮಾಡಿಲ್ಲ. ನಮ್ಮ ಸರ್ಕಾರ ವೀರಪ್ಪನಿಗೆ ಶರಣಾಗತಿ ಕೊಡತಕ್ಕ ಪ್ರಶ್ನೆಯನ್ನು ಸಹ ಮಾಡಿಲ್ಲ. ಮತ್ತೆ ಈ ಕೇಸನ್ನು ಬೇರೆ ರಾಜ್ಯಕ್ಕೆ ವರ್ಗಾವಣೆ ಮಾಡತಕ್ಕ ಪ್ರಶ್ನೆಯೂ ಇಲ್ಲ. ಬಹಳ ಮುಖ್ಯವಾಗಿರತಕ್ಕಂಥದ್ದು ಎಂದರೆ ನಮ್ಮ ಸರ್ಕಾರಕ್ಕೆ ಈ ನಮ್ಮ ಸರ್ಕಾರಕ್ಕೆ ಈ ಸದನಕ್ಕೆ ತಿಳಿಸಿದ ಹಾಗೆ ಮಾಡಿ ಸದನಕ್ಕೆ ಅಪಮಾನ ಮಾಡುವ ಉದ್ದೇಶ ನಮ್ಮ ಸರ್ಕಾರಕ್ಕೆ ಇಲ್ಲ. ಹಾಗೆಯೇ ವಿರೋಧ ಪಕ್ಷದ ನಾಯಕರು ಹಾಗೂ ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಎತ್ತಿರತಕ್ಕ ಪ್ರಶ್ನೆ ಸರಿಯಾಗಿಯೇ ಇದೆ. ಈ ದಿವಸ ನಮ್ಮ ಸರ್ಕಾರದ ಸಿಬ್ಬಂದಿಯವರು ವೀರಪ್ಪನ್ ವಶದಲ್ಲಿರುವುದರಿಂದ ಯಾವುದೇ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಆಗುವುದು ಬೇಡ. ಹಲವಾರು ಬಾರಿ ಇದರ ಬಗ್ಗೆ ಚರ್ಚೆ ಆಗಿದೆ. ಚರ್ಚೆಯಾಗಬಾರದು, ಮುಚ್ಚಿಟ್ಟುಕೊಳ್ಳಬೇಕು ಎನ್ನತಕ್ಕಂಥದ್ದು ನಮ್ಮ ಸರ್ಕಾರದ ಉದ್ದೇಶ ಅಲ್ಲ. ಹಾಗೂ ಮುಖ್ಯಮಂತ್ರಿಗಳಿಗಾಲೀ ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಬಯಸುತ್ತೇನೆ. ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ನಂತರ ಇದನ್ನು ಚರ್ಚೆ ಮಾಡೋಣ. ಆದುದರಿಂದ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ಹಾಗೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚೆನ್ನೈಗೆ ಹೋಗಿದ್ದಾರೆ. ಅವರು ಇವತ್ತು ಮಧ್ಯಾಹ್ನದೊಳಗೆ ಬರುವವರಿದ್ದಾರೆ. ನಂತರ ಅಲ್ಲಿ ಏನೆಲ್ಲಾ ಚರ್ಚೆ ಆಗಿದೆ ಎನ್ನುವುದನ್ನು ಈ ಸದನದ ಮೂಲಕ ಸಾರ್ವಜನಿಕರಿಗೆ ತಿಳಿಸತಕ್ಕದ್ದು ನಮ್ಮ ಸರ್ಕಾರದ ಜವಾಬ್ದಾರಿ ಅದನ್ನು ನಾವು ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತಿನವರೆಗೆ ಅಷ್ಟು ಜನ ಒತ್ತೆಯಾಳುಗಳು ಒಂದೇ ಕಡೆ ಯಾವ ಕಾರಣಕ್ಕಾಗಿ ಹೋಗಿದ್ದರು, ಎಲ್ಲಿಗೆ ಹೋಗಿದ್ದರು? ಅವರನ್ನು ಹಿಡಿದಿರತಕ್ಕ ಸಂದರ್ಭ ಏನು

ಎನ್ನುವ ಒಂದು ವಿಷಯವನ್ನಾಗಲೀ ಈವರೆಗೆ ಈ ಸದನಕ್ಕಾಗಲೀ, ಜನತೆಗಾಗಲಿ ತಿಳಿಸುವ ಪ್ರಯತ್ನವನ್ನು ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನಾವು ಎಲ್ಲಾ ವಿಚಾರಗಳನ್ನು ಸದನದ ಮುಂದಿಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಅನೇಕ ವಿಚಾರಗಳನ್ನು ಹೊರಗಡೆಗೆ ಕಳುಹಿಸಬಾರದು ಎಂದು ಇಲ್ಲಿ ಹೇಳುತ್ತೀರಿ, ಆದರೆ ಪೊಲೀಸ್ ಇಲಾಖೆಗಳಲ್ಲಿ ಅಧಿಕಾರಿಗಳು ಏನು ಮಾತನಾಡುತ್ತಾರೆ, ಏನು ಆಪರೇಷನ್ ಮಾಡುತ್ತಾರೆ? ಅವರ ಸಾಧನೆ ಏನು ಎನ್ನುವುದು ಮಾರನೆ ದಿವಸದ ಪತ್ರಿಕೆಗಳಲ್ಲಿ ಬರುತ್ತದೆ. ನೀವು ರೂಮಿನಲ್ಲಿ ಕುಳಿತು ನಾಳೆ ಏನು ಮಾಡಬೇಕು ಎಂದು ಆಲೋಚನೆ ಮಾಡಿದ್ದು ಸಹಿತ ಪತ್ರಿಕೆಗಳಲ್ಲಿ ಬರುತ್ತದೆ. ಆದುದರಿಂದ ನೀವು ಅವನನ್ನು ಹುಡುಕಬೇಕು ಎಂದು ಹೊರಟರೆ ಅದಕ್ಕೆ ಅವನು ಮೊದಲೇ ತಕ್ಕ ಸಿದ್ದತೆಗಳನ್ನು ಮಾಡಿಕೊಂಡಿರುತ್ತಾರೆ.

ಅಧ್ಯಕ್ಷರೆ : ಮೇಡಂ ಪ್ರಮೀಳಾರವರೇ, ನನಗೆ ಒಂದು ಅನುಮಾನ ಇದೆ. ಕೇಸನ್ನು ವರ್ಗಾವಣೆ ಮಾಡಬೇಕಾದರೆ, the criminal cases that are pending trial and if they were to be transferred from one jurisdiction, to the other juirisdiction. whether the court should order or the Government has to do that?

SMT. PRAMILA NESARGI : The supreme court only has to do it. The Government cannot do that.

ಅಧ್ಯಕ್ಷರು : ನಾನು ಕೇಳಿದ್ದುದು ಏಕೆಂದರೆ ಪ್ರಮೀಳಾರವರು ಪ್ರಾಕ್ಟೀಸಿಂಗ್ ಅಡ್ವೋಕೇಟ್ ಇದ್ದಾರೆ. ಶರಣಾಗತಿ ಹೇಗೆ ಎಂದರೆ ನಾನು ಈ ತಪ್ಪುಗಳನ್ನು ಮಾಡಿದ್ದೇನೆ, ನನ್ನನ್ನು ಹುಡುಕಬೇಡಿ ನಾನೇ ಬಂದು ಕೋರ್ಟಿಗೆ ಶರಣಾಗತನಾಗುತ್ತೇನೆ ಎಂದು ಶರಣಾಗತನಾಗುತ್ತಾನೆ. ಯಾವುದೇ ಒಬ್ಬ ವ್ಯಕ್ತಿಗೆ ಆ ಅವಕಾಶ ಇದೆ. ಆ ಹಕ್ಕು ಇದೆ. He can surrender. He can come and surrender to law. ವೀರಪ್ಪನಿಗೂ ಸಹ ಆ ಹಕ್ಕು ಇದೆ. ಎರಡನೆಯದು Transfer of cases ಅಧಿಕಾರ ಈ ಸರ್ಕಾರಕ್ಕೂ ಇಲ್ಲ, ತಮಿಳುನಾಡು ಸರ್ಕಾರಕ್ಕೂ ಆ ಅಧಿಕಾರ ಇಲ್ಲ. That authority vests with the supreme court. ಶಿಕ್ಷೆ ಏನು ಕೊಡಬೇಕು ಎನ್ನುವುದು ಕೋರ್ಟಿಗೆ ಬಿಟ್ಟಿದ್ದು, ಅದಕ್ಕೆ ಸಂಬಂಧಿಸಿದ್ದು, ಒತ್ತೆಯಾಳುಗಳ ಬಿಡುಗಡೆ ಅದು ಇದು ಎಲ್ಲಾ ಮುಖ್ಯಮಂತ್ರಿಗಳು ಬಂದಾಗ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕು ಎನ್ನುವುದರಲ್ಲಿ ಯಾವುದೇ ಅಭ್ಯಂತರ ಇಲ್ಲ. ಹಾಗೆ ವೀರಪ್ಪನ್ ಬಗ್ಗೆ ಸರ್ಕಾರ ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕ ನೀತಿ ಏನು ಇದೆ, ಅದು ಹೆಜ್ಜೆ ಹೆಜ್ಜೆಗೂ ವಿಫಲವಾಗಿದೆ. ಇದು ಕರ್ನಾಟಕ ಸರ್ಕಾರಕ್ಕೆ ಗೌರವ ತರತಕ್ಕದ್ದು ಅಲ್ಲ. ಸರ್ಕಾರ ಈ ವಿಷಯದಲ್ಲಿ ಯದ್ವಾತದ್ವಾ ಎಡವಿದ್ದಾರೆ, ಅದಕ್ಕೆ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗವನ್ನು ಮಾಡುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ : ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರ ಮತ್ತು ಪೊಲೀಸ್ ಇಲಾಖೆ ಏನು ಕ್ರಮ ಕೈಗೊಳ್ಳುತ್ತದೆ ಎನ್ನತಕ್ಕ ಸಂದರ್ಭದಲ್ಲಿ ಇವತ್ತು ತೀರ್ಮಾನ ಆಗಿದ್ದು, ನೀವು ಕಾರ್ಯಗತ ಮಾಡುವುದಕ್ಕೆ ಮುಂಚಿತವಾಗಿ ಅವರಿಗೆ ಸುದ್ದಿ ಹೋಗುತ್ತದೆ ಎಂದು ಅವರು ಪ್ರಸ್ತಾಪ ಮಾಡಿದರೆ ಸರ್ಕಾರದಿಂದ ಉತ್ತರ ಕೊಡುತ್ತಾರೆ. ನಿಮ್ಮ ಕಾಲದಲ್ಲೂ ಈ ರೀತಿ ಆಗುತ್ತಿತ್ತು ಎಂದರೆ ಅವರ ಕಾಲದಲ್ಲಿ ಇವರ ಕಾಲದಲ್ಲಿ ಪೋಲೀಸ್ ಇಲಾಖೆಯಲ್ಲಿ ಬಿಗಿ ಇಲ್ಲದಿರುವುದರಿಂದ ಇವರಿಬ್ಬರ ತಪ್ಪಿನಿಂದ ಏನಾದರೂ ವೀರಪ್ಪನ್ ಬಲಿಯುತ್ತಿದ್ದಾನೆಯೇ ಎನ್ನತಕ್ಕ ಪ್ರಶ್ನೆ ಬರುತ್ತದೆ.

ಅಧ್ಯಕ್ಷರು : ನಾನು ಹೇಳುವುದು ಈಶ್ವರಪ್ಪನವರೇ, ವಿಧಾನಸಭೆಯಲ್ಲಿ ನಾವು ಮಾತನಾಡುವ ವೇಳೆಯಲ್ಲಿ ಮಾತಿಗಾಗಿ ನಾವು ಮಾತನಾಡುವುದು ಬೇಡ. ಎಲ್ಲೋ ಒಂದು ಕಡೆಗೆ ನಾವು ಆತ್ಮವಂಚನೆಯನ್ನು ಮಾಡಿಕೊಳ್ಳದೆ ಸ್ವಲ್ಪ ನಮ್ಮನ್ನು ನಾವೇ self-introspection ಮಾಡಿಕೊಂಡು ಮಾತನಾಡೋಣ. ಒಂದು ಕ್ಯಾಬಿನೆಟ್‌ನಲ್ಲಿ ಒಂದು ವಿಷಯ ಚರ್ಚೆಗೆ ಬರುತ್ತದೆ ಎಂದರೆ ಚರ್ಚೆಗೆ ಅಲ್ಲಿ ಬರುವ ಮೊದಲು ಅದರ ತಯಾರು ಮಾಡಿರತಕ್ಕ ನೋಟ್ ಸಂಬಂಧಪಟ್ಟ ಹಿತಾಸಕ್ತಿಗಳ ಕೈಯಲ್ಲಿ ಸೇರಿರುತ್ತದೆ. ಈ ವ್ಯವಸ್ಥೆ ಆ ಕ್ಯಾಬಿನೆಟ್, ಈ ಕ್ಯಾಬಿನೆಟ್ ಎಂದು ಅಲ್ಲ. ಈ ವ್ಯವಸ್ಥೆ ಹಾಗೆ ಇದೆ. ನಾನು ಮೊನ್ನೆ ಕೂಡ ಹೇಳಿದೆ ಇದೊಂದು ವಿಷವರ್ತುಲ, ಈ ಒಂದು ವಿಷವರ್ತುಲದೊಳಗೆ ನಾವೆಲ್ಲಾ ಜೀವಂತರಾಗಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ನನಗೆ ಭಯ ಏಕೆ ಆಗುತ್ತಿದೆ ಎಂದರೆ, ಸರ್ಕಾರದ ಈ ದೌರ್ಬಲ್ಯನೇ ಜನರನ್ನು ಹಾಳು ಮಾಡುತ್ತಿದೆ. ಇದರಿಂದ ಜನರಿಗೆ ಸರ್ಕಾರದ ಮೇಲೆ ವಿಶ್ವಾಸ ಹೇಗ ಬರುತ್ತದೆ?

ಅಧ್ಯಕ್ಷರು : ತಮ್ಮಲ್ಲಿ ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ, ಇಲ್ಲಿ ನಿಮ್ಮ ಪಕ್ಷದವರು ಕೆಲವು ಕಡೆ ಸರ್ಕಾರ ನಡೆಸುತ್ತಿದ್ದಾರೆ. ಈ ವ್ಯವಸ್ಥೆ ಇದೆಯಲ್ಲ, ಈ ವ್ಯವಸ್ಥೆಯೊಳಗೆ ಎಲ್ಲಾ ಸಹಜವಾಗಿಯೇ ನಡೆದುಕೊಂಡು ಹೋಗುತ್ತಿರುತ್ತದೆ. ಎಲ್ಲೋ ಒಂದು ಕಡೆ ನಾವು ಅಮೂಲಾಗ್ರವಾದ ಬದಲಾವಣೆಯನ್ನು ನಾವು ತರದ ಹೊರತು ಈ ವ್ಯವಸ್ಥೆಯಲ್ಲಿ ಈ ತರಹದ ಸಮಸ್ಯೆಗಳನ್ನು ನಾವು ಅನುಭವಿಸಬೇಕಾಗುತ್ತದೆ. ಅದಕ್ಕೆ ನಾವು ಪ್ರತಿಸಲ ಹೇಳತಕ್ಕಂಥದ್ದು, ಇವತ್ತು ನೀವು ಅಲ್ಲದ್ದೀರಿ, ನಾಳೆ ನಿಮ್ಮ ಪಕ್ಷಕ್ಕೆ ಹೆಚ್ಚಿನ ಅಧಿಕಾರಿ ಬಂದು ಹೆಚ್ಚು ಜನ ಶಾಸಕರು ಬಂದು ನೀವು ಇಲ್ಲಿ ಬರುತ್ತೀರಿ, ಇವರು ಇಲ್ಲಿಗೆ ಬರುತ್ತಾರೆ ಆದರೆ ಇದನ್ನೆಲ್ಲಾ ಮಾಡತಕ್ಕವರು ಅವರು ಅಲ್ಲಿಯೇ ಇರುತ್ತಾರೆ. ಅರ್ಥ ಆಯಿತಾ? ಆಳುವ ಪಕ್ಷ ಬೇರೆ, ಆಳುವ ವರ್ಗ ಬೇರೆ, ಆಳುವ ವರ್ಗ ಖಾಯಂ ಆಗಿ ಅಲ್ಲೇ ಇರುತ್ತಾರೆ. ಆಳುವ ಪಕ್ಷಗಳು ಮಾತ್ರ ಬದಲಾವಣೆ ಆಗುತ್ತವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಳುವ ಪಕ್ಷದ ಬಗ್ಗೆ ಬಿಗಿ ನಿಲುವು ತೆಗೆದುಕೊಂಡರೆ ಸಮಸ್ಯೆ ಪರಿಹಾರ ಆಗುವುದಿಲ್ಲ ಅಧ್ಯಕ್ಷರೆ, ಆಳುವ ಪಕ್ಷ ಆಳುವ ವರ್ಗದ ಹಿಡಿತದಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೇನೋ ಎಂದು ನನಗೆ ಅನುಮಾನವಾಗುತ್ತಿದೆ. ಅದಕ್ಕಾಗಿ ತಮ್ಮ ಹತ್ತಿರ ಪ್ರಸ್ತಾಪ ಮಾಡುತ್ತಿದ್ದೇನೆ.

ಡಾ|| ಎಂ.ಪಿ. ಕರ್ಕಿ : ತಾವು ಹೇಳಿದ ಪ್ರಕಾರ ಇದನ್ನು ಒಪ್ಪಿಕೊಳ್ಳಬೇಕು ಎಂಬುದು ಅರ್ಥ ಆಯಿತು.

ಅಧ್ಯಕ್ಷರು : ನಾನು ಇದನ್ನು ಒಪ್ಪಿಕೊಳ್ಳಬೇಕು ಎಂದಾಗಲಿ, ಸಮರ್ಥನೆ ಮಾಡಬೇಕು ಎಂದಾಗಲಿ, ಅಸಹಾಯಕತೆಯನ್ನಾಗಲೀ ವ್ಯಕ್ತಪಡಿಸುತ್ತಿಲ್ಲ. ಇದಕ್ಕೆ ತಯಾರಿ ಎಲ್ಲಿ ನಡೆಯಬೇಕು ಎಂದರೆ ಸದನದ ಹೊರಗೆ ಆಯಾ ರಾಜಕೀಯ ಪಕ್ಷಗಳಲ್ಲಿ ನಡೆಯಬೇಕು. ಅವರಿಗೆ ಈ ವಿಷಯದಲ್ಲಿ ಸ್ಪಷ್ಟತೆ ಇರಬೇಕು. ದಕ್ಷತೆ ಇರಬೇಕು. ಅವರ ದೃಷ್ಟಿ ನೆಟ್ಟಗೆ ಇರಬೇಕು. ಅಲ್ಲಿ ತಯಾರಿ ಆಗಬೇಕು. ಇಲ್ಲಿ ಸಡನ್ ಆಗಿ ಬಂದು ತಯಾರಿ ಹೇಗೆ ಬರುತ್ತದೆ ಹೇಳಿ?

ಡಾ|| ಎಂ.ಪಿ. ಕರ್ಕಿ : ಇದು ಸರ್ಕಾರದ ಅಸಹಾಯಕತೆ, ಅಸಮಾನತೆಯನ್ನು ತೋರಿಸುವುದಲ್ಲದೇ, ಏನನ್ನು ಸಿಕ್ರೇಟ್ ಆಗಿ ಇಡಬೇಕು ಎನ್ನುತ್ತೀರಿ, ಅದು ಮಾಡುವುದು ಅವರ ಕರ್ತವ್ಯ. ಯಾವುದನ್ನು ಮಾಡಲಿಕ್ಕೆ ಸಾಧ್ಯವಿಲ್ಲ, ಅದು ಅವರ ಅಸಹಾಯಕತೆ, ಅಸಮರ್ಥನೆಯನ್ನು ತೋರಿಸುವುದಿಲ್ಲವೇ?

ಶ್ರೀ ಹೆಚ್.ಎನ್. ನಂಜೇಗೌಡ : ಈಗ ನೀವು ಹೇಳಿದ್ದನ್ನು ಒಪ್ಪಿಕೊಂಡರೆ, ಇದು ಬಾರಿ ಸೆನ್ಸ್‌ಸಿಟೀವ್, ಇದು ಬಾರಿ ಕಷ್ಟ, ಬಾರಿ ಡೇಲಿಕೇಟ್, ಚರ್ಚೆ ಮಾಡುವುದು ಬೇಡ ಎಂದು ಹೇಳುವುದರಲ್ಲಿ ಅರ್ಥ ಇಲ್ಲ.

MR. SPEAKER : I did not say that.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಅದನ್ನು ಹೇಳಲಿಲ್ಲ. ಹೇಳಿದ್ದು ಎಲ್ಲಾ ಆಳುವ ವರ್ಗ ಬೇರೆ, ಆಳುವ ಪಕ್ಷ ಬೇರೆ, ಆ ವರ್ಗ ಅಲ್ಲೇ ಇರುತ್ತದೆ. ಆ ವರ್ಗದ ಮುಖಾಂತರ ಎಲ್ಲಾ ಹೊರಗೆ ಬರುತ್ತದೆ ಎಂದಮೇಲೆ, ಇಲ್ಲಿ ಏಕೆ ಚರ್ಚೆ ಆಗಬಾರದು?

ಅಧ್ಯಕ್ಷರು : ಮಾಡಿ, you take up a discussion. I will be too glad. ಆ ತರಹದ academic interest ಗಾಗಿ ಬೇಕಾದರೆ healthy ಬೇಟನ್ನು oneday exclusive ಆಗಿ ನೀವು ಮಾಡಿ, ಒಂದು ದಿವಸ ಪೂರ್ತಿ ಅದಕ್ಕೆ ಕೊಡೋಣ. ಹೇಗೇಗೆ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ರೀತಿ ನಡೆಯುತ್ತದೆ ಎಂಬುದನ್ನು ಚರ್ಚೆ ಮಾಡೋಣ.

11.40 ಎಂ.ಎಂ

ನಾನು ಒಂದು ಮಾತನ್ನು ನಿಮಗೆ ಕೇಳುತ್ತೇನೆ. ಮೊನ್ನೆ ಕೂಡ ಒಂದು ಸಲ ಹೇಳಿದ್ದೆ. ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ, ಎಲ್ಲಿ ಹೈಟೆನ್‌ಷನ್ ಲೈನ್ ಹೋಗುತ್ತದೆ ಅಲ್ಲಿ. 13 ಅಡಿ ಹಾರಿಜಾಂಟಲ್ ಆಗಿ ಮತ್ತು 13 ಅಡಿ ಪ್ಯಾರಲಲ್‌ಆಗಿ ಯಾವುದೇ, ಟೆಂಪೊರರಿ ಅಥವಾ ಪರ್ಮನೆಂಟ್ ಕನ್‌ಸ್ಟ್ರಕ್ಷನ್ಸ್, ಇನ್‌ಸ್ಟಾಲೇಷನ್ಸ್ ಬರಬಾರದು, ಸ್ಟ್ರಕ್ಚರ್ಸ್ ಬರಬಾರದು ಎಂದು ಇದೆ. ಆದರೆ ವೀನಸ್ ಸರ್ಕಸ್‌ಗೆ ಅನುಮತಿ ಕೊಟ್ಟರು. 300 ಜನ ಮಕ್ಕಳು ಸತ್ತು ಹೋದರು. ಆ

ಮಗುವಿನಲ್ಲಿ ಯಾವ್ಯಾವ ಮಗು ಬದುಕಿದ್ದರೆ ಏನು ಆಗುತ್ತಿತ್ತೋ, ಗೊತ್ತಿಲ್ಲ. ಯಾವ ಮಗು ಭಗತ್‌ಸಿಂಗ್ ಆಗುತ್ತಿತ್ತೋ, ಯಾವ ಮಗು ಸುಭಾಷ್‌ಚಂದ್ರ ಬೋಸ್ ಆಗುತ್ತಿತ್ತೋ, ಯಾವ ಮಗು ಡಾ: ರಾಮನ್ ಆಗುತ್ತಿತ್ತೋ ನಮಗೆ ಗೊತ್ತಿಲ್ಲ. 300 ಜನ ಮಕ್ಕಳು ಸುಟ್ಟು ಕರಕಲಾಗಿ ಬಿಟ್ಟರು. ಏನು ಮಾಡಿದ್ದೇವೆ ನಾವು? ಪ್ರಶ್ನೆ ಮಾಡಿಕೊಳ್ಳಿ. ಇಲ್ಲಿ ಇದ್ದವರ ಯಾರ ಮಕ್ಕಳು ಸಾಯಲಿಲ್ಲ. ಸತ್ತವರ ಮಕ್ಕಳ ತಂದೆತಾಯಿಗಳು ಇಲ್ಲಿಗೆ ಬರಲಿಲ್ಲ. ಗಂಗಾರಾಂ ಕಟ್ಟಡ ಕುಸಿದು ಬಿದ್ದುಹೋಯಿತು. ಏನು ಮಾಡಿದ್ದೇವೆ? ಸಾರಾಯಿ ದುರಂತ ಏನು ಮಾಡಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಏನು ಹೀಗೆ ಕೇಳುತ್ತೀರಿ. ಸಂಬಂಧಪಟ್ಟಿರುವವರಿಗೆಲ್ಲಾ ನಾವು ಪ್ರೊಮೋಷನ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಅದಕ್ಕೇ ನಾನು ಹೇಳಿದ್ದುದು. ನಾನು ಏನು ಹೇಳುತ್ತೇನೆ ಎಂದರೆ, ಆತ್ಮವಂಚನೆ ಮಾಡಿಕೊಳ್ಳದೆ ನ್ಯಾಯವಾಗಿ ಮಾತನಾಡುವುದಾದರೆ ಒಂದಲ್ಲ, ಎರಡು ದಿವಸ ಪ್ರತ್ಯೇಕವಾಗಿ ಈ ವಿಚಾರಗಳನ್ನು ಚರ್ಚೆ ಮಾಡೋಣ. ಎಲ್ಲಿ ಜಾತಿ ಅಡ್ಡ ಬರುತ್ತದೆ, ಎಲ್ಲಿ ಕುಲ ಬರುತ್ತದೆ, ಎಲ್ಲಿ ಹಣ ಬರುತ್ತದೆ, ಎಲ್ಲ ಪಕ್ಷ ಬರುತ್ತದೆ, ಅವುಗಳಿಗೆಲ್ಲಾ ಒಳಗಾಗಿ ನಾವು ಯಾವಯಾವ ರೀತಿಯ ಜನದ್ರೋಹವನ್ನು ಈ ಸದನದ ಹೆಸರಿನಲ್ಲಿ ಮಾಡುತ್ತೇವೆ. ಈ ಎಲ್ಲಾ ವಿಚಾರಗಳಲ್ಲೂ ನಿರ್ವಿಕಾರವಾದಂಥ ಮನಸ್ಸಿನಿಂದ ಎಲ್ಲರೂ ಚರ್ಚೆ ಮಾಡೋಣ. ಯಾರು ಬೇಡ ಎಂದು ಹೇಳಿದರು. ಮಾಡೋಣ ಅದಕ್ಕೆ ನಾನು ಒಪ್ಪುತ್ತೇನೆ. ಈಗ ಶ್ರೀನಿವಾಸ್ ಅವರು ಶೂನ್ಯ ವೇಳೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಮಾಡಿ. ಆದರೆ ಏಕೆ ಹೋದರು ಎಂದು ನಮಗೆ ಹೇಳಿದರೆ ಸಾಕು. ಚರ್ಚೆಗೇ ಒಂದು ದಿವಸವನ್ನು ಫಿಕ್ಸ್ ಮಾಡುವುದಾದರೆ ಮಾಡಿ ಹೇಳದೇ ಕೇಳದೇ ಏಕೆ ಹೋದರು, ಇದು ಸರಿಯಲ್ಲ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬಂದು ಹೇಳುತ್ತಾರೆ. ಶ್ರೀನಿವಾಸ್‌ರವರೇ, ಪ್ರಸ್ತಾಪ ಮಾಡಿ.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ : ಬಿಜಾಪುರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಮಾತನಾಡಲು ತಾವು ಅವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ನೀವು ಒಂದು ನೋಟೀಸ್ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಈ ವಿಚಾರವಾಗಿ ಒಂದು ಹೇಳಿಕೆ ಮಾಡುತ್ತೇನೆ.

ಅಧ್ಯಕ್ಷರು : ಹೇಳಿಕೆಯನ್ನು ಆಮೇಲೆ ಮಾಡಿಸುತ್ತೇನೆ. ಈಗ ಶ್ರೀನಿವಾಸ್‌ರವರು.

ವಿಶ್ವಭಾರತಿ ಹೌಸಿಂಗ್ ಸೊಸೈಟಿಯವರು ಗಿರಿನಗರ ಹತ್ತಿರ25 ಎಕರೆ ಸರ್ಕಾರಿ ಜಮೀನಿಗೆ ಬೋಗಸ್ ದಾಖಲೆ ಸೃಷ್ಟಿ ಮಾಡಿ ಮಾರಾಟ ಮಾಡುತ್ತಿರುವುದು

+ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ವಿಶ್ವಭಾರತಿ ಕೋ ಆಪರೇಟೀವ್ ಸೊಸೈಟಿಯ ಬಗ್ಗೆ ನಾನು ಹಿಂದೆಯೂ ಇಲ್ಲಿ ಪ್ರಶ್ನೆ ಮಾಡಿದ್ದೆ. ಇದು ಈ ಸದನದಲ್ಲಿ ಚರ್ಚೆಯಾಗಿದೆ.